# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 28-12-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಮಹದೇವ. ಎಂ. | - ಅಧ್ಯಕ್ಷರು | ಸಂಬಂಧಪಟ್ಟ ಅಧಿಕಾರಿಗಳು, |
| ಎಂ. ಆನಂದ್ | - ಸದಸ್ಯರು | -- |
| ಉಮಾ. ಎನ್ | - ಸದಸ್ಯರು | -- |
| ಮಂಜುಳ ವಿಜಯಕುಮಾರ್ | - ಸದಸ್ಯರು | -- |
| ಅನ್ಸರ್ ಪಾಷ. ಎಸ್ | - ಸದಸ್ಯರು | -- |
| ಆಂಜನಪ್ಪ. ಎಂ | - ಸದಸ್ಯರು | -- |
| ಕೆ.ಗಣೇಶ್ ರಾವ್ ಮಾನೆ | - ಸದಸ್ಯರು | -- |
| ದಾಸೇಗೌಡ. ಸಿ | - ಸದಸ್ಯರು | -- |
| ಶಿವಕುಮಾರ್. ಕೆ | - ಸದಸ್ಯರು | -- |
| ಎಂ. ವೆಂಕಟೇಶ್ (ಸಂಗಾತಿ) | - ಸದಸ್ಯರು | -- |
| ಹೆಚ್.ಸಿ. ನಾಗರತ್ನ ರಾಮಮೂರ್ತಿ | - ಸದಸ್ಯರು | -- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *ವಿಷಯದ ಸಂಖ್ಯೆ: ತೆಆಸ್ಥಾಸ/186/2017-18*

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಹನ ಸಂಚಾರದ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳು ಸಂಭವಿಸುತ್ತಿದ್ದು, ತುರ್ತು ಸಂದರ್ಭಗಳಲ್ಲಿ ಪ್ರಾಣಾಪಾಯದಲ್ಲಿರುವ ರೋಗಿಗಳನ್ನು **ಏರ್ ಆಂಬ್ಯುಲೆನ್ಸ್** ಮುಖಾಂತರ ಅತಿ ಜರೂರಾಗಿ ಆಸ್ಪತ್ರೆ/ನರ್ಸಿಂಗ್ ಹೋಮ್‌ಗಳಿಗೆ ಸಕಾಲದಲ್ಲಿ ತಲುಪಿಸಿ ಪ್ರಾಣಾಪಾಯದಿಂದ ರಕ್ಷಿಸಲು ಮತ್ತು ಹೆಲಿಕಾಪ್ಟರ್ ಮೂಲಕ ಗಣ್ಯಾತಿ ಗಣ್ಯರಿಗೂ ನಿಗಧಿತ ಸ್ಥಳಕ್ಕೆ ಸಕಾಲದಲ್ಲಿ ತಲುಪುವ ಸಲುವಾಗಿ ಸಂಚಾರಕ್ಕೆ ಅನುಕೂಲ ಕಲ್ಪಿಸುವ ಹಿತದೃಷ್ಟಿಯಿಂದ ಪಾಲಿಕೆಯ ಎಂಟು ವಲಯಗಳ ವ್ಯಾಪ್ತಿಯಲ್ಲಿ ತಲಾ ಒಂದು **ಹೆಲಿಪ್ಯಾಡ್** ನಿರ್ಮಾಣ ಮಾಡಲು ಸೂಕ್ತ ಸ್ಥಳಗಳನ್ನು ಗುರುತಿಸಿ, ಸಾಧಕ ಭಾದಕಗಳ ಬಗ್ಗೆ ಅಗತ್ಯ ವರದಿಯೊಂದಿಗೆ ವಿಸ್ತೃತವಾದ ಯೋಜನಾ ವರದಿ ತಯಾರಿಸಿ ಪ್ರಸ್ತಾವನೆಯನ್ನು ಮುಂದಿನ ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಆಯುಕ್ತರು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಇದಕ್ಕೆ ವೆಚ್ಚವಾಗುವ ಅನುದಾನವನ್ನು 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಡುವ ಷರತ್ತಿನೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯಿಸಿ ಅನುಮೋದನೆಗಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿತು.

## *ವಿಷಯದ ಸಂಖ್ಯೆ: ತೆಆಸ್ಥಾಸ/187/2017–18*

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ರಾಜ ಕಾಲುವೆಗಳಿಗೆ, ಕೆರೆಗಳಿಗೆ ಕಟ್ಟಡಗಳ ಘನತ್ಯಾಜ್ಯಗಳನ್ನು ಸುರಿಯುತ್ತಿದ್ದು, ನಗರದಲ್ಲಿ ಜಲ ಸಂಗ್ರಹ ಸ್ಥಳಗಳ ಸಂರಕ್ಷಣೆ ಹಿತದೃಷ್ಟಿಯಿಂದ ಕಟ್ಟಡ ತ್ಯಾಜ್ಯವನ್ನು ಸುರಿಯುವ ವಾಹನಗಳಿಗೆ (ಪ್ರತಿ ವಾಹನಕ್ಕೆ) ಟ್ರ್ಯಾಕ್ಟರ್/ಚಿಕ್ಕಲಾರಿಗೆ ರೂ.1.00 ಲಕ್ಷ ಹಾಗೂ ದೊಡ್ಡ ಲಾರಿಗೆ ರೂ.5.00 ಲಕ್ಷಗಳ ದಂಡವನ್ನು ವಿಧಿಸಲು ಆಯುಕ್ತರು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯಿಸಿ ಅನುಮೋದನೆಗಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಿತು.

## *ವಿಷಯದ ಸಂಖ್ಯೆ: ತೆಆಸ್ಥಾಸ/188/2017–18*

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬೆಲ್ಲಹಳ್ಳಿ ವ್ಯಾಪ್ತಿಯ ಕ್ವಾರಿಯನ್ನು ಈಗ ಕಟ್ಟಡದ ತ್ಯಾಜ್ಯದಿಂದ ಭರ್ತಿ ಮಾಡಲಾಗುತ್ತಿದ್ದು, ಸದರಿ ಭರ್ತಿ ಮಾಡಿದ ಸ್ಥಳವನ್ನು ಸದುಪಯೋಗ ಪಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಯುವ ಜನತೆಯು ಮುಖ್ಯ ರಸ್ತೆಗಳಲ್ಲಿ ಬೈಕ್ ವೀಲ್ಹಿಂಗ್ ಮಾಡುವುದು ಮತ್ತು ರೇಸ್ ಮಾಡುವುದನ್ನು ಕಾಣುತ್ತಿದ್ದೇವೆ. ಮುಖ್ಯ ರಸ್ತೆಗಳಲ್ಲಿ ಈ ರೀತಿಯ ಕ್ರೀಡೆಗೆ ಅವಕಾಶವಿರುವುದಿಲ್ಲ. ಇದು ಕಾನೂನಿಗೆ ವಿರುದ್ಧವಾಗಿದ್ದು ಸಾರ್ವಜನಿಕರ ಮರಣಕ್ಕೆ ಮತ್ತು ಅಪಘಾತಗಳಿಗೆ ಕಾರಣವಾಗುತ್ತಿದೆ. ಆದ್ದರಿಂದ ಯುವಕರುಗಳಿಗೆಕಾನೂನು ಬದ್ಧ ಕ್ರೀಡೆಗಳಿಗೆ ಅನುಕೂಲವಾಗುವಂತೆ ಸದರಿ ಸ್ಥಳಗಳಲ್ಲಿ ರೇಸ್ ಟ್ರ್ಯಾಕ್ ನಿರ್ಮಾಣ ಮಾಡಲು ಹಾಗೂ ಇದಕ್ಕೆ ಅಗತ್ಯವಿರುವ ಅನುದಾನವನ್ನು 2018–19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸುವ ಷರತ್ತಿಗೆ ಒಳಪಟ್ಟು ಆಯುಕ್ತರು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಿ ಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.

## *ವಿಷಯದ ಸಂಖ್ಯೆ: ತೆಆಸ್ಥಾಸ/189/2017–18*

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆವ್ಯಾಪ್ತಿಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಗಾಂಧಿನಗರ, ಮಹಾತ್ಮಗಾಂಧಿ ರಸ್ತೆ (ಕಮರ್ಷಿಯಲ್ ಸ್ಟ್ರೀಟ್ ಹತ್ತಿರ), ಡಿಸ್ಪೆನ್ಸರಿ ರಸ್ತೆ, ಮತ್ತು ಶಿವಾಜಿನಗರ (ರಸಲ್ ಮಾರುಕಟ್ಟೆ ಎದುರು) 4 (ನಾಲ್ಕು) ಕಡೆಗಳಲ್ಲಿ ಪ್ರಾಯೋಗಿಕವಾಗಿ ಹಾಗೂ ಪ್ರಮುಖ ಆಯ್ದ ಪ್ರದೇಶಗಳಲ್ಲಿ Automated Pay & Park ಪಾವತಿ ಮತ್ತು ನಿಲುಗಡೆ ವಾಹನ ನಿಲ್ದಾಣಗಳನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿ ತಯಾರಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಆಯುಕ್ತರು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಿಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.

***ವಿಷಯದ ಸಂಖ್ಯೆ: ತೆಆಸ್ಥಾಸ/190/2017–18***

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ಮಟ್ಟದಲ್ಲಿ ಪಾಲಿಕೆಯ ಸ್ವಂತ ಸಂಪನ್ಮೂಲಗಳಿಂದ ಸಂಗ್ರಹವಾಗುವ ಆದಾಯದಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಕ್ರಿಯಾ ಯೋಜನೆ ಕಾಮಗಾರಿಗಳು, ರಸ್ತೆ, ಚರಂಡಿ, ಉದ್ಯಾನವನ, ಆಟದ ಮೈದಾನ, ಕೆರೆಗಳು ಕಟ್ಟಡ, ಕಲ್ಯಾಣ ಕಾರ್ಯಕ್ರಮಗಳನ್ನು ಮತ್ತು ಇತರೇ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಪ್ರಸ್ತುತ ಪಾವತಿ ಮಾಡಲು ಬಾಕಿ ಇರುವ ಬಿಲ್ಲುಗಳ ಪಾವತಿಗೆ ತಹಲ್ ವರೆಗೆ ಅಂದಾಜು ಬಾಕಿ ಬಿಲ್ಲುಗಳ ಮೊತ್ತ ರೂ.1160.00 ಕೋಟಿಗಳಷ್ಟು ಇದ್ದು, ಪ್ರಸ್ತುತ ಗುತ್ತಿಗೆದಾರರಿಗೆ ಪಾವತಿ ಮಾಡಲು ರೂ.800.00 ಕೋಟಿಗಳು ಕೊರತೆ ಉಂಟಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪೂರ್ಣಗೊಂಡ ಕಾಮಗಾರಿ ಬಾಕಿ ಬಿಲ್ಲುಗಳ ಮೊತ್ತವನ್ನು ಸಕಾಲದಲ್ಲಿ ಗುತ್ತಿಗೆದಾರರಿಗೆ ಪಾವತಿಯಾಗದೇ ಇರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರು ಹೊಸ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವುದರಿಂದ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿರುತ್ತದೆ. ಹಾಗೂ ಪಾಲಿಕೆ ವ್ಯಾಪ್ತಿಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಸಾಕಷ್ಟು ಹಾಳಾಗಿದ್ದು, ಇವುಗಳನ್ನು ತುರ್ತಾಗಿ ದುರಸ್ತಿ ಮಾಡುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಿಲ್ಲುಗಳ ಪಾವತಿಗಾಗಿ ಕಾಯುತ್ತಿರುವ ಗುತ್ತಿಗೆದಾರರು ಮತ್ತು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆಗಳಿಗೆ ಬಾಕಿ ಬಿಲ್ಲುಗಳ ಮೊತ್ತವನ್ನು ಪಾವತಿಸಲು ರೂ.800.00 ಕೋಟಿಗಳ ಅನುದಾನವನ್ನು ಸರ್ಕಾರವನ್ನು ಕೋರುವುದು ಅಥವಾ ಸರ್ಕಾರದಿಂದ ಶೇ.4ಷ್ಟು ಬಡ್ಡಿ ದರದಲ್ಲಿ ಸಾಲವನ್ನು ಸರ್ಕಾರದಿಂದ ಪಡೆಯುವುದು ಅಥವಾ ಸ್ಪರ್ಧಾತ್ಮಕ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಅಲ್ಪಾವಧಿ ಸಾಲವನ್ನು ಪಡೆದು ಪ್ರತಿ ಮಾಹೆ ರೂ.100.00 ಕೋಟಿಯಂತೆ ಸಾಲವನ್ನು ತೀರುವಳಿ ಮಾಡಲು ಆಯುಕ್ತರು ಸರ್ಕಾರದ ಅನುಮೋದನೆ ಪಡೆದು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯಿಸಿ ಪಾಲಿಕೆ ಸಭೆಯ ಮುಂದೆ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.

***ವಿಷಯದ ಸಂಖ್ಯೆ: ತೆಆಸ್ಥಾಸ/191/2017–18***

**ಸ್ವ ನಿರ್ಣಯ: [SU-MOTTO DECISION]**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯನ್ನು ಸಂಗ್ರಹಿಸುವ ಸಂಬಂಧ ನಿಗಧಿತ ಗುರಿಯನ್ನು ತಲುಪುವ ದೃಷ್ಟಿಯಿಂದ, ಪಾಲಿಕೆಗೆ ಅತಿ ಹೆಚ್ಚು ಸಂಪನ್ಮೂಲವನ್ನು ಒದಗಿಸುವ ಸಂಬಂಧ ಮಹದೇವಪುರ ಮತ್ತು ಬೊಮ್ಮನಹಳ್ಳಿ ವಲಯಗಳು ಪ್ರಮುಖವಾಗಿರುತ್ತದೆ. ಈ ಎರಡೂ ವಲಯಗಳು ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ದಿನೇ ದಿನೇ ಹೆಚ್ಚು ಹೆಚ್ಚು ಮಾಲ್‌ಗಳು, ಟೆಕ್ ಪಾರ್ಕ್‌ಗಳು ಬಹು ಅಂತಸ್ತಿನ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ವಸತಿ ಸಮುಚ್ಚಯಗಳು, ಪಿ.ಜಿ. ಹಾಸ್ಟಲ್‌ಗಳು, ಶಿಕ್ಷಣ ಸಂಸ್ಥೆಗಳು, ಅತೀ ವೇಗದಲ್ಲಿ ನಿರ್ಮಾಣಗೊಳ್ಳುತ್ತಿದ್ದು, ಈ ವಲಯಗಳಲ್ಲಿ

ಕಂದಾಯ ವಿಭಾಗದಿಂದ ನಿರೀಕ್ಷಿತ ಮಟ್ಟದಲ್ಲಿ ಆಸ್ತಿ ತೆರಿಗೆ ವಸೂಲಾತಿ ಸಂಗ್ರಹವಾಗುತ್ತಿಲ್ಲ. ಅನೇಕ ಕಟ್ಟಡಗಳು ತೆರಿಗೆ ಪಾವತಿಸದೇ ವಂಚಿಸುತ್ತಿರುವುದು ಆಸ್ತಿ ತೆರಿಗೆ ಜಾಲದೊಳಗೆ ಬಾರದೇ ಇರುವುದು, ಕಟ್ಟಡಗಳ ವಿಸ್ತೀರ್ಣದ ಬಗ್ಗೆ ತಪ್ಪು ಘೋಷಣೆ ಮಾಡಿರುವುದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕೈಗೊಂಡ ತಪಾಸಣೆ ಸಮಯದಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮೂರನೇ ಏಜೆನ್ಸಿ ಮೂಲಕ ಈ ಎರಡೂ ವಲಯಗಳಲ್ಲಿ ಎಲ್ಲಾ ರೀತಿಯ ಕಟ್ಟಡಗಳ ಉಪಯೋಗ, ವಿಸ್ತೀರ್ಣ, ಮಹಡಿಗಳ ಅಳತೆ ಹಾಗೂ ಸರ್ವೇ ಕೈಗೊಂಡು ಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿ/ಸಿಬ್ಬಂಧಿಗಳೊಡನೆ ತಾಳೆ ಮಾಡಿಸಿ ತಪ್ಪು ಪ್ರಕರಣಗಳಿಗೆ ನಿಯಮಾನುಸಾರ ತೆರಿಗೆ ಮತ್ತು ದಂಡ ವಿಧಿಸಿ ಅಂತಹ ಕಟ್ಟಡಗಳ ಮಾಲೀಕರುಗಳಿಂದ ಹೆಚ್ಚಾಗಿ ವಸೂಲಿ ಮಾಡಿದಂತಹ ಮೊತ್ತದಲ್ಲಿ ಮೂರನೇ ವ್ಯಕ್ತಿಗೆ/ಸಂಸ್ಥೆಗೆ/ಏಜೆನ್ಸಿಗೆ ಶುಲ್ಕವನ್ನು ಪಾವತಿಸುವ ಸಂಬಂಧ ಟೆಂಡರ್ ಪಡೆದು ಏಜೆನ್ಸಿಗೆ **ಶೇಕಡವಾರು**ದರವನ್ನು ನಿಗಧಿಪಡಿಸಿ ಪಾವತಿಸಲು ಆಯುಕ್ತರು ಸರ್ಕಾರದ ಅನುಮೋದನೆ ಪಡೆದು ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಿರ್ಣಯಿಸಿ ಪಾಲಿಕೆಯ ಸಭೆಯ ಮುಂದೆ ಅನುಮೋದನೆಗೆ ಮಂಡಿಸಲು ತೀರ್ಮಾನಿಸಿತು.

**(ಮಹದೇವ. ಎಂ)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**